**ಓ.ಎಸ್. ನಂಃ 342/2018**

**ಪಿ.ಡಬ್ಲ್ಯೂಃ 2**

**ದಿನಾಂಕ 05.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಕೆ.ಎಸ್.ಡಿ. ವಕೀಲರಿಂದಃ**

1. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ಸರ್ವೇ ನಂಬರ್ 176 ರ ಪಕ್ಕದಲ್ಲಿ ನನಗೆ ಸೇರಿದ ಜಮೀನು ಇದೆ. ಸರ್ವೇ ನಂಬರ್ 176/4 ರಲ್ಲಿ ನನಗೆ ಸೇರಿದ 10 ಗುಂಟೆ ಜಮೀನು ಇದೆ. ನನಗೆ ಸೇರಿದ ಸರ್ವೇ ನಂಬರ್ 176/4 ರ 10 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಸರ್ವೇ ನಂಬರ್ 176/4 ರ 10 ಗುಂಟೆ ಜಮೀನನ್ನು ನಾನು ಸುಮಾರು 4 ರಿಂದ 5 ವರ್ಷಗಳ ಹಿಂದೆ 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ.

2. ಸರ್ವೇ ನಂಬರ್ 176/4 ರ 10 ಗುಂಟೆ ಜಮೀನು ನನ್ನ ಪಿತ್ರಾರ್ಜಿತ ಆಸ್ತಿ ಆಗಿತ್ತು ಎಂದರೆ ಸರಿ. ಸರ್ವೇ ನಂಬರ್ 176/4 ರ 10 ಗುಂಟೆ ಜಮೀನನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡುವ ಪೂರ್ವದಲ್ಲಿ ನಾನು ಮತ್ತು ನನ್ನ ಚಿಕ್ಕಪ್ಪಂದಿರು ಸದರಿ ಆಸ್ತಿಯನ್ನು ಉಳುಮೆ ಮಾಡುತ್ತಿದ್ದೇವು ಎಂದರೆ ಸರಿ. ಸರ್ವೇ ನಂಬರ್ 176/4 ಹಾಗೂ ಸರ್ವೇ ನಂಬರ್ 1156/4 ರ ಆಸ್ತಿಗಳಲ್ಲಿ ಇರುವ ಕಾಲುದಾರಿಯನ್ನು ಉಪಯೋಗಿಸಲು 1 ನೇ ಪ್ರತಿವಾದಿ ಅಡ್ಡಿಪಡಿಸುತ್ತಿದ್ದಾರೆ ಎಂದು ಹೇಳಿ ನಾನು ಇಲಿಯವರೆಗೂ 1 ನೇ ಪ್ರತಿವಾದಿಯ ವಿರುದ್ಧ ಎಲ್ಲಿಯೂ ಸಹ ದೂರನ್ನು ನೀಡಿರುವುದಿಲ್ಲ.

3. ನಿಮ್ಮ ಸರ್ವೇ ನಂಬರ್ 176/4 ರ 10 ಗುಂಟೆ ಜಮೀನಿಗೆ ಚಾಮರಾಜ ನಾಲಾ ಏರಿಯಿಂದ ನೀವು ಹೋಗುವುದು ಮತ್ತು ಬರುವುದು ಮಾಡುತ್ತಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ನಿಡಿ.1(ಎ) ಇದು ಚಾಮರಾಜ ನಾಲಾ ಏರಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಡಿ.1(ಎ) ರ ನಾಲಾ ಏರಿಯ ಕೆಳಭಾಗದಲ್ಲಿರುವ ಜಮೀನನ್ನು 1 ನೇ ಪ್ರತಿವಾದಿಯು ಒತ್ತುವರಿ ಮಾಡಿ ವ್ಯವಸಾಯ ಮಾಡುತ್ತಿದ್ದಾರೆ ಎಂದು ಸ್ವತಃ ನುಡಿದಿರುತ್ತಾರೆ.

4. ನಿಡಿ.1(ಎ) ರ ನಾಲಾ ಏರಿಯ ಮೂಲಕವೇ ಹಲವಾರು ರೈತರು ತಮ್ಮ ಹಲವಾರು ಎಕರೆ ಆಸ್ತಿಗಳಿಗೆ ಹೋಗಿ ಬರುವುದು ಮಾಡುತ್ತಾರೆ ಎಂದರೆ ಸರಿ. ನಿಡಿ.1(ಎ) ರ ನಾಲಾ ಏರಿಯ ಅಕ್ಕ-ಪಕ್ಕದಲ್ಲಿ ವಾದಿ, ಪ್ರತಿವಾದಿ ಮತ್ತು ಅವರ ಸಹೋದರರ ಜಮೀನುಗಳು ಇವೆ ಎಂದರೆ ಸರಿ. ನಿಡಿ.2(ಎ) ರ ದಾರಿಯ ಬಲ ಮತ್ತು ಎಡಬದಿಯಲ್ಲಿ ಕಾಣುತ್ತಿರುವ ತೋಟಗಳು ಹಾಗೂ ನಿಡಿ.2(ಎ) ರ ದಾರಿಯ ಮುಂಭಾಗದಲ್ಲಿರುವ ಮನೆ ಮತ್ತು ತೋಟ ವಾದಿಯರ ಸರ್ವೇ ನಂಬರ್ 176 ರ ಆಸ್ತಿಗಳು ಎಂದರೆ ಸರಿಯಲ್ಲ.

5. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿ ಸಾಮಾನ್ಯವಾಗಿ ನಾಲಾ ಏರಿಯಿಂದ ಕೆಳಗೆ ಇರುವ ಜಮೀನುಗಳಿಗೆ ಹೋಗಲು ಸದರಿ ಪೋಟೋದಲ್ಲಿ ಕಾಣುವಂತಹ ಇಳಿಜಾರಿನ ರಸ್ತೆ ನಿರ್ಮಾಣ ಮಾಡಬೇಕಾಗುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನೋಡಿ ಹೌದು ಎಂದು ಉತ್ತರಿಸಿದ್ದು, ಸದರಿ ಪೋಟೋವನ್ನು ನಿಡಿ.6 ಎಂದು ಗುರುತಿಸಲಾಯಿತು. ಪ್ರತಿವಾದಿಯರು ನಾಲಾ ಏರಿಯಿಂದ ಕೆಳಗೆ ಇದ್ದ ಇಳಿಜಾರಿನ ರಸ್ತೆಯನ್ನು ಮುಚ್ಚಿ ಹಾಕಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ.

6. ಸರ್ವೇ ನಂಬರ್ 176 ರಲ್ಲಿ ಸುಮಾರು 6 ರಿಂದ 7 ಜನ ಮಾಲೀಕರಿಗೆ ಸೇರಿದ ಜಮೀನುಗಳು ಇವೆ. ಸರ್ವೇ ನಂಬರ್ 176 ರ ಜಮೀನಿನ ಉಳಿದ ಮಾಲೀಕರು ಮತ್ತು ನೀವು ಪ್ರತಿವಾದಿಯರ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಮೊದಲು ದಾರಿಯ ಸಂಬಂಧ ಯಾವುದೇ ತೊಂದರೆ ಇರಲಿಲ್ಲ ಆದ್ದರಿಂದ ನಾವು ಯಾವುದೇ ದೂರನ್ನು ನೀಡಿರಲಿಲ್ಲ ಎಂದು ನುಡಿದಿರುತ್ತಾರೆ.

7. ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ಸರ್ವೇ ನಂಬರ್ 176 ರಲ್ಲಿ ಮೊದಲಿಗೆ 1ನೇ ಪ್ರತಿವಾದಿಯು ಆಸ್ತಿಯನ್ನು ಖರೀದಿಸಿದ್ದು, ನಂತರದಲ್ಲಿ ವಾದಿಯು ತಮ್ಮ ಆಸ್ತಿಯನ್ನು ಖರೀದಿಸಿರುತ್ತಾರೆ. ವಾದಿಯು ಸರ್ವೇ ನಂಬರ್176/5 ರಲ್ಲಿ 10 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ. ವಾದಿಯು ಖರೀದಿಸಿರುವ ಸರ್ವೇ ನಂಬರ್ 176/5 ರ 10 ಗುಂಟೆ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ -ಎಂ.ವಿ ವೆಂಕಟೇಶರವರ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ-

ರಾಮೇಗೌಡರವರ ಜಮೀನು ಎಂದರೆ ಸರಿ. ಉತ್ತರಕ್ಕೆ-ಎಂ.ಕೆ. ನಟರಾಜರವರ ಜಮೀನು ಎಂದರೆ ಸರಿ ಹಾಗೂ ದಕ್ಷಿಣಕ್ಕೆ -ಕೃಷ್ಣೇಗೌಡರವರ ಜಮೀನು ಎಂದರೆ ಸರಿ.

8. ದಾವಾ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ -ಸರ್ವೇ ನಂಬರ್ 1156/4 ರ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ-1 ನೇ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ-ಸರ್ವೇ ನಂಬರ್ 179 ರ ಉಳಿದ ಜಮೀನು ಇದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ - ಸರ್ವೇ ನಂಬರ್ 176 ರ ಜಮೀನು ಎಂದರೆ ಸರಿ.

9. ಸರ್ವೇ ನಂಬರ್ 1156/4 ರ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ -ಎಂ.ಕೆ.ಸುರೇಶ ಮತ್ತು ಎಂ.ಕೆ.ರಮೇಶರವರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ-1 ನೇ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ-1 ನೇ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. ದಕ್ಷಿಣಕ್ಕೆ - 2 ನೇ ವಾದಿಯ ಜಮೀನು ಎಂದರೆ ಸರಿ.

10. ದಾವಾ ಆಸ್ತಿ ಮತ್ತು ಪ್ರತಿವಾದಿಯರ ಆಸ್ತಿಗಳ ಸಂಬಂಧ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಹಲವಾರು ಬಾರಿ ಜಗಳವಾಗಿದೆ ಎಂದರೆ ಸಾಕ್ಷಿಯು ದಾರಿಯ ಸಂಬಂಧ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಹಲವಾರು ಬಾರಿ ಜಗಳವಾಗಿದೆ ಎಂದು ನುಡಿದಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ನಡೆಯುತ್ತಿದ್ದ ಜಗಳದ ಸಂಬಂಧ ಶಾಸಕರಾದ ಸಾರಾ ಮಹೇಶ ರವರು ಮತ್ತು ಊರಿನ ಮುಖಂಡರು ಸೇರಿ ನ್ಯಾಯ ಪಂಚಾಯಿತಿಕೆ ಮಾಡಿ ವಾದಿ ಮತ್ತು ಅವರ ಕುಟುಂಬಸ್ಥರಿಗೆ ತಿರುಗಾಡಲು 1 ನೇ ಪ್ರತಿವಾದಿಯ ಅಣ್ಣನಾದ ಕೃಷ್ಣೇಗೌಡರ ಜಮೀನಿನಲ್ಲಿ 2 ½ ಗುಂಟೆ ಜಮೀನನ್ನು ಬಿಡಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿ 2 ½ ಗುಂಟೆ ಬೇರೆ ಸರ್ವೇ ನಂಬರಿಗೆ ಸಂಬಂಧಿಸಿದಂತೆ ಇದ್ದ ತಕರಾರು ಇತ್ಯರ್ಥಪಡಿಸಿದ್ದು ದಾವಾ ಆಸ್ತಿಯಲ್ಲಿರುವ ದಾರಿಯ ಸಂಬಂಧ ತಕರಾರು ಇತ್ಯರ್ಥಪಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಶಾಸಕರು ಮತ್ತು ಊರಿನ ಮುಖಂಡರು ಸೇರಿ ದಾವಾ ಆಸ್ತಿಯ ಸಂಬಂಧ ಇದ್ದ ತಕರಾರು ಇತ್ಯರ್ಥಪಡಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಊರಿನಲ್ಲಿ ಇರದ ಕಾರಣ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

11. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿದ್ದು, ಸದರಿ ಪೋಟೋ ದಾವಾ ಆಸ್ತಿಯ ಪೋಟೋ ಎಂದು ಸಾಕ್ಷಿಯು ನೋಡಿ ಒಪ್ಪಿದ ಕಾರಣ ಸದರಿ ಪೋಟೋವನ್ನು ನಿಡಿ.7 ಎಂದು ಗುರುತಿಸಲಾಯಿತು. ನಿಡಿ.3(ಎ) ಇಕ್ಕಲಿನ ಬಲ ಮತ್ತು ಎಡಭಾಗದಲ್ಲಿರುವ ಎರಡು ಆಸ್ತಿಗಳು ಸಹ 1 ನೇ ಪ್ರತಿವಾದಿಗೆ ಸೇರಿದ ಆಸ್ತಿಗಳು

ಎಂದರೆ ಸರಿ. ಸರ್ವೇ ನಂಬರ್ 176/4 ರ ಆಸ್ತಿಯನ್ನು ಮಾರಾಟ ಮಾಡಿದ ನಂತರ ನನಗೆ ಸರ್ವೇ ನಂಬರ್ 176/4 ರಲ್ಲಿ ಬೇರೆ ಯಾವುದೇ ಆಸ್ತಿಗಳು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಸರ್ವೇ ನಂಬರ್ 179 ರಲ್ಲಿ ಆಸ್ತಿ ಇದೆ ಎಂದು ಸ್ವತಃ ನುಡಿದಿರುತ್ತಾರೆ. ಸರ್ವೇ ನಂಬರ್ 176/4 ಮತ್ತು ಸರ್ವೇ ನಂಬರ್ 179 ಇವೆರಡು ಅಕ್ಕಪಕ್ಕದಲ್ಲಿವೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ಹೇಳಿ ಬರೆಸಿರುವುದಿಲ್ಲ. ಸರ್ವೇ ನಂಬರ್ 179 ರಲ್ಲಾಗಲೀ ಅಥವಾ ಸರ್ವೇ ನಂಬರ್ 176 ರ ಸುತ್ತಮುತ್ತಲಿನ್ನಗಲೀ ನನಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ದಾರಿ ಇಲ್ಲದಿದ್ದರು ಸಹ ವಾದಿಯರು ಆರ್ಥಿಕವಾಗಿ ಸಬಲರಾಗಿದ್ದು, ಅವರು ನಿಮಗೆ ಬೇಕಾದಗೆಲ್ಲ ಸಾಲ ಕೊಡುತ್ತಿರುವ ಕಾರಣ ನೀವು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡದೇ ಮೌನವಾಗಿ ನಿಂತಿರುತ್ತಾರೆ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**